**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>**

**<u>ಸಿ.ಸಿ.ನಂ.376/2023</u>**

ಅಸಾಃ 2 (ಚಾಸಾ-3)

| | |
|---|---|
| ಹೆಸರು | ಬೀಮಪ್ಪ ಪಾಟೀಲ |
| ತಂದೆಯ /ಗಂಡನ ಹೆಸರು | ಪರಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ರಬಕವಿ |

ದಿನಾಂಕ 30-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-</u>**

ನನಗೆ ಚಾಸಾ- 1 ಮತ್ತು 2 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇಲ್ಲ.ದಿನಾಂಕ 23-01-2023 ರಂದು ನಾನು ರಬಕವಿಯ ಹೊಸ ಬಸ್ಸ ನಿಲ್ದಾಣದ ಹತ್ತಿರ ಇದ್ದಾಗ ನನ್ನ ಪರಿಚಯದವರಾದ ಸಂಜೀವ ಕುಳ್ಳೂರ ಇವರಿಗೆ ದೇಸಾಯಿ ತೋಟದ ರಸ್ತೆಯ ಬಾಜು ಅಪಘಾತವಾಗಿದೆ ಎಂದು ಹೇಳಿದಾಗ ನಾನು ಸ್ಥಳಕ್ಕೆ ಹೋಗಿದ್ದು ಆಗ ಪೋಲಿಸರು ಬೆಳಿಗ್ಗೆ 06-30 ರಿಂದ 07-00 ಗಂಟೆ ವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿ ನಿಪಿ-3 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ.

ನಂತರ ದಿನಾಂಕ 24-01-2023 ರಂದು ಬೆಳಿಗ್ಗೆ 10-30 ರಿಂದ 11-00 ಗಂಟೆ ವರೆಗೆ ತೇರದಾಳ ಪೋಲಿಸ ಠಾಣೆಯ ಆವರಣದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಹಿಂದಿನ ದಿನದ ಮಾಹಿತಿಯನ್ನು ತೆಗೆದುಕೊಂಡು ಬಸ್ಸ ಮುಂದೆ ನಿಲ್ಲಿಸಿ ಪೋಟೋವನ್ನು ತೆಗೆದಿರುತ್ತಾರೆ.

ಸಾಕ್ಷಿ ನಿಪಿ-2 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ 01 ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆ ವಾಹನ ತಡೆ ಪಂಚನಾಮೆ ಇದ್ದು ಅದನ್ನು ನಿಪಿ-4 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಎರಡು

ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 24-01-2023 ರಂದು ಬೆಳಿಗ್ಗೆ 11-15 ರಿಂದ 12-00 ಗಂಟೆ ವರೆಗೆ ತೇರದಾಳ ಪೋಲಿಸರು ಠಾಣಾ ಆವರಣದಲ್ಲಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಪಿ-4 ರಂತೆ ವಾಹನ ತಡೆ ಪಂಚನಾಮೆ ಮಾಡಿ ಬಸ್ಸನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಎಸ್ ವಕೀಲರಿಂದ:-**

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.376/2023**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಮಮತಾ ಕೆ |
| ತಂದೆಯ /ಗಂಡನ ಹೆಸರು | ಸಂಜೀವ ಕುಲ್ಲೂರ |
| ವಯಸ್ಸು | 36 ವರ್ಷ |
| ಉದ್ಯೋಗ | ಉಪನ್ಯಾಸಕಿ |
| ವಾಸಸ್ಥಳ | ರಬಕವಿ |

ದಿನಾಂಕ 30-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-9 ನನ್ನ ಗಂಡ. ನನಗೆ ಚಾಸಾ-3 ,4,6 ,7 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇರುವದಿಲ್ಲ. ದಿನಾಂಕ 23-01-2023 ರಂದು ಬೆಳಿಗ್ಗೆ 06-00 ಗಂಟೆಗೆ ನನ್ನ ಗಂಡನಾದ ಚಾಸಾ-9 ರವರು ಎಂದಿನಂತೆ ವಾಯು ವಿಹಾರಕ್ಕೆ ಹನಗಂಡಿ ಕಡೆಗೆ ಹೋಗಿದ್ದರು. ಯಾವಾಗಲೂ 07-00 ಹೊತ್ತಿಗೆ ಮರಳಿ ಮನೆಗೆ ಬರುತ್ತಿದ್ದರು. ಆದರೆ ಸದರಿ ದಿನದಂದು 07 ಗಂಟೆ ಆದರೂ ಮನೆಗೆ ಮರಳಿ ಬಂದಿರುವದಿಲ್ಲ. ಅಷ್ಟರಲ್ಲಿ ಚಾಸಾ-4 ರವರು ನನಗೆ ಫೋನ ಮಾಡಿ ನನ್ನ ಗಂಡನಿಗೆ ಹನಗಂಡಿಯ ದೇಸಾಯಿ ಇವರ ಜಮೀನು ಹತ್ತಿರ ಸರ್ಕಾರಿ ಬಸ್ಸ ಹಾಯ್ದು ತಲೆಗೆ ಪಟ್ಟಾಗಿರುತ್ತದೆ ಎಂದು ಹೇಳಿರುತ್ತಾರೆ. ಆಗ ನಾನು ಮತ್ತು ಚಾಸಾ- 6 ಮತ್ತು 7 ರವರೊಂದಿಗೆ ಸ್ಥಳ ಹೋಗಿ ನೋಡಿದಾಗ ಸಾಕಷ್ಟು ಜನರು ಸೇರಿದ್ದು, ನನ್ನ ಗಂಡನ ತಲೆಯ ಹಿಂಬಾಗದಿಂದ , ಹಣೆ ಮತ್ತು ಮೂಗಿನಿಂದ ರಕ್ತ ಬರುತ್ತಿತ್ತು. ಅವರು ಮಾತನಾಡುವ ಸ್ಥಿತಿಯಲ್ಲಿ ಇರಲ್ಲಿಲ್ಲ. ಈ ಕುರಿತು ಚಾಸಾ- 4 ರವರನ್ನು ವಿಚಾರಿಸಿದಾಗ ನನ್ನ ಗಂಡನಾದ ಚಾಸಾ- 9 ರವರು ವಾಕಿಂಗ್ ಮುಗಿಸಿ ರಬಕವಿ ಕಡೆಗೆ ಬರುತ್ತಿದ್ದಾಗ ಹನಗಂಡಿಯಿಂದ ಬರುತ್ತಿದ್ದ ಸರ್ಕಾರಿ ಬಸ್ಸ ನಂಬರ ಕೆ ಎ-29-ಎಫ್ 1352 ನೇದ್ದನ್ನು ಬಸ್ಸ ಚಾಲಕನು ಅತೀ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ನನ್ನ ಗಂಡನಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿದ್ದು ಆಗ ನನ್ನ ಗಂಡ ನೆಲಕ್ಕೆ ಬಿದ್ದಿರುತ್ತಾರೆಂದು ಮತ್ತು ಬಸ್ಸ ಚಾಲಕನು ಬಸ್ಸನ್ನು ನಿಲ್ಲಸದೇ ಮುಂದಕ್ಕೆ ಚಲಾಯಿಸಿಕೊಂಡು ಹೋಗಿರುತ್ತಾರೆಂದು ಚಾಸಾ-4 ರವರು ನನ್ನ ಹತ್ತಿರ ಹೇಳಿರುತ್ತಾರೆ. ಅಲ್ಲಿದ್ದ ಸ್ಥಳೀಯರು ಬಸ್ಸನ್ನು ನಿಲ್ಲಿಸಲು

ಪ್ರಯತ್ನಿಸಿದಾಗ ಆರೋಪಿ ಬಸ್ಸ ನ್ನು ಬಿಟ್ಟು ಪರಾರಿಯಾಗಲೂ ಯತ್ನಿಸಿರುತ್ತಾನೆಂದು ಹೇಳಿರುತ್ತಾರೆ. ನಂತರ ನಾನು ನನ್ನ ಗಂಡನನ್ನು ಮೊದಲು ಖಾಸಗಿ ಆಸ್ಪತ್ರೆಗೆ ದಾಖಲ ಮಾಡಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಿರಜ ಆಸ್ಪತ್ರೆಗೆ ದಾಖಲ ಮಾಡಿರುತ್ತೇನೆ. ಅದೇ ದಿನ ದಿನಾಂಕ 23-01-2023 ರಂದು ನಾನು ಠಾಣೆಗೆ ಹೋಗಿ ದೂರನ್ನು ದಾಖಲು ಮಾಡಿರುತ್ತೇನೆ. ಮರು ದಿನ ಬೆಳಿಗ್ಗೆ 10 ಗಂಟೆಗೆ ಪೋಲಿಸರು ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಿ ಪೋಟೋವನ್ನು ತೆಗೆದಿರುತ್ತಾರೆ. ಆಗ ಚಾಸಾ- 2 ಮತ್ತು 3 ರವರು ಹಾಜರು ಇದ್ದರು. ಬಸ್ಸ ಚಾಲಕನ ಹೆಸರು ಶಿವಪ್ಪ ರಾಮಲಿಂಗ ತಳವಾರ ಅಂತಾ ಇರುತ್ತದೆ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆ ಫಿರ್ಯಾದಿಯಾಗಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆ ಸ್ಥಳ ಪಂಚನಾಮೆ ಇದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಎರಡು ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ. ಆರ್ ಆರ್ ಎಸ್ ವಕೀಲರಿಂದ:-**

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ .